# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 611 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಪ್ರಶ್ನೆ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 1987ಕ್ಕೆ ಮೊದಲು ಪ್ರಾರಂಭಿಸಿದ 32 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಿ 2013ರಲ್ಲಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೆ? (ಪಾಲಿಟೆಕ್ನಿಕ್‌ಗಳ ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಇಡಿ 101 ಟಿಪಿಇ 2012, ದಿನಾಂಕ:13.02.2013 ಮತ್ತು ದಿನಾಂಕ:16.03.2013ಗಳಲ್ಲಿ ದಿನಾಂಕ:01.06.1987 ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಹಾಗೂ 15 ವರ್ಷಗಳ ಅಸ್ಥಿತ್ವವನ್ನು ಪೂರೈಸಲ್ಪಟ್ಟಿರುವ 31 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ.<br>ಪಾಲಿಟೆಕ್ನಿಕ್‌ಗಳ ವಿವರಗಳಿಗೆ ಸಂಬಂಧಿಸಿದಂತೆ ಆದೇಶದ ಪ್ರತಿಗಳನ್ನು ಅನುಬಂಧ-1 & 2ರಲ್ಲಿ ನೀಡಲಾಗಿದೆ. |
| (ಆ) | ಈ ಆದೇಶ ಅನುಷ್ಠಾನವಾಗದಿರಲು ಕಾರಣಗಳೇನು; | 1987ರ ಪೂರ್ವದಲ್ಲಿ ಪ್ರಾರಂಭಿಸಲಾದ 31 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಮತ್ತು 01.06.1987ರ ಪೂರ್ವದಲ್ಲಿ ಪ್ರಾರಂಭಗೊಂಡಿದ್ದ ಯಾದಗಿರಿ ಪಾಲಿಟೆಕ್ನಿಕ್‌ನ ಸಿವಿಲ್ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸನ್ನು ಮತ್ತು ಎಸ್.ಜೆ.ಎಂ ಪಾಲಿಟೆಕ್ನಿಕ್, ಚಳ್ಳಕೆರೆ ಈ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯ ಬಗ್ಗೆ ಸಹಮತಿ ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದಾಗ, ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಹೊಸ 33 ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಲು ಉದ್ದೇಶಿಸಿರುವ ಪ್ರಸ್ತಾವನೆಯನ್ನು ಸಧ್ಯಕ್ಕೆ ಕೈಬಿಡಲಾಗಿದೆಯೆಂದು ಆರ್ಥಿಕ ಇಲಾಖೆಯು ದಿನಾಂಕ:01-02-2019 ರಂದು ಟಿಪ್ಪಣಿ ಸಂಖ್ಯೆ:ಆಇ 927 ವೆಚ್ಚ-8/2018ರಲ್ಲಿ ತಿಳಿಸಿರುತ್ತದೆ. |

| | | |
|---|---|---|
| | | • ಪ್ರಸ್ತುತ ರಾಜ್ಯದಲ್ಲಿ 82 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಮತ್ತು 44 ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. 2018–19ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ರೂ.439.00 ಕೋಟಿಗಳನ್ನು ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ರೂ.377.00 ಕೋಟಿಗಳನ್ನು (ರೂ.377.00ಕೋಟಿ + ರೂ.439.00ಕೋಟಿ = ರೂ.816.00ಕೋಟಿಗಳು) ಒದಗಿಸಲಾಗಿದೆ.<br><br>• ಈಗಾಗಲೇ ಅನುದಾನಕ್ಕೆ ಒಳಪಡಿಸಲಾಗಿರುವ 44 ಪಾಲಿಟೆಕ್ನಿಕ್‌ಗಳಿಗೆ ಒದಗಿಸಲಾಗಿರುವ ಅನುದಾನ ರೂ.377.00 ಕೋಟಿಗಳು ಸಾಕಾಗುವುದಿಲ್ಲ ಎಂಬ ಅಂಶವನ್ನು ಗಮನಕ್ಕೆ ತೆಗೆದುಕೊಂಡಾಗ ಹೊಸ 33 ಪಾಲಿಟೆಕ್ನಿಕ್‌ಗಳನ್ನು ಅನುದಾನಕ್ಕೆ ಒಳಪಡಿಸಿದಾಗ ಅದರಿಂದ ಆರ್ಥಿಕ ಹೊರೆಯು (ರೂ.377.00ಕೋಟಿ + ರೂ.59.93ಕೋಟಿ) ಒಟ್ಟು ರೂ.436.93 ಕೋಟಿಗಳಿಗಷ್ಟೆ ಸೀಮಿತಗೊಳ್ಳದೆ ಅದರ ಹೊರೆಯು ಹೆಚ್ಚಾಗುತ್ತದೆ.<br><br>• ಉನ್ನತ ಶಿಕ್ಷಣ ವಲಯದಲ್ಲಿ ಈಗಾಗಲೇ ಪ್ರಾರಂಭಿಸಿರುವ ಕಾಲೇಜುಗಳಿಗೆ ಮತ್ತು ಪಾಲಿಟೆಕ್ನಿಕ್‌ಗಳಿಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಒದಗಿಸಲು ಸಂಪನ್ಮೂಲದ ಕೊರತೆ ಇರುತ್ತದೆ. ಯು.ಜಿ.ಸಿ, ಎಐಸಿಟಿಇ ಮತ್ತು 06ನೇ ರಾಜ್ಯ ವೇತನ ಪರಿಷ್ಕರಣೆಯಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಈಗಾಗಲೇ ಉಂಟಾಗಿರುವ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಸಂಸ್ಥೆಗಳನ್ನು ಬಲಪಡಿಸಲು ಅಗತ್ಯ ಅನುದಾನವನ್ನು ನೀಡಲು ಮೊದಲ ಆದ್ಯತೆ ನೀಡಬೇಕಾಗಿರುತ್ತದೆ. ಈಗ ಅನುದಾನಕ್ಕೆ ಒಳಪಡಿಸಲು ಉದ್ದೇಶಿಸಿರುವ ಸಂಸ್ಥೆಗಳು ಪ್ರಮುಖ ನಗರ ಪ್ರದೇಶಗಳಲ್ಲಿದ್ದು, ಈ ಪ್ರದೇಶದಲ್ಲಿ ಈಗಾಗಲೇ ಸಾಕಷ್ಟು ಸಂಖ್ಯೆಯ ಸರ್ಕಾರಿ/ಅನುದಾನಿತ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. |

| | | |
|---|---|---|
| (ಇ) | ಸಚಿವ ಸಂಪುಟ ಉಪಸಮಿತಿಯು ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆಯೆ; | ಹೌದು. ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸಿನಂತೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದಾಗ, ಆರ್ಥಿಕ ಇಲಾಖೆಯು ತಿಳಿಸಿರುವ ಅಂಶವನ್ನು ಮೇಲೆ ವಿವರಿಸಲಾಗಿದೆ. |
| (ಈ) | ಶಿಫಾರಸ್ಸು ಮಾಡಿದ್ದಲ್ಲಿ ಯಾವಾಗ ಈ 32 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶ ಹೊರಡಿಸಲಾಗುವುದು? | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 507 ವೆಚ್ಚ–8/2022, ದಿನಾಂಕ: 23.06.2022ರಲ್ಲಿ ಆಡಳಿತ ಇಲಾಖೆಯ ಹಂತದಲ್ಲಿ ವೇತನಾನುದಾನಕ್ಕೆ ಒಳಪಡಿಸಲು ಬಾಕಿ ಇರುವ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ಪರಿಶೀಲನೆಗೆ ಸಲ್ಲಿಸುವಂತೆ ತಿಳಿಸಲಾಗಿದೆ. ಅದರಂತೆ ನಿಯಮಾನುಸಾರ ಕ್ರಮವಹಿಸಲಾಗುವುದು. |

**ಇಡಿ 119 ಟಿಪಿಇ 2022**

**(ಡಾ॥ ಅಶ್ವತ್ಥನಾರಾಯಣ್.ಸಿ.ಎನ್)**
ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ ಸಚಿವರು

ಅನುಬಂಧ – 1

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ದಿನಾಂಕ:1-6-1987ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಹಾಗೂ 15 ವರ್ಷಗಳ ಅಸ್ತಿತ್ವವನ್ನು ಪೂರೈಸಲ್ಪಟ್ಟಿರುವ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ

**ಓದಲಾಗಿದೆ:**

1) ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಟಿಇ 20 ಡಿವಿಪಿ (1) 2010, ದಿನಾಂಕ:14-03-2012 ಮತ್ತು 09-01-2013.

೨) ಖಾಸಗಿ ಪಾಲಿಟೆಕ್ನಿಕ್‌ಗಳ ಆಡಳಿತ ಮಂಡಳಿಗಳ ಕೋರಿಕೆ / ಮನವಿಗಳು

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಪತ್ರಗಳಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ದಿನಾಂಕ:1-6-1987ರ ಪೂರ್ವದಲ್ಲಿ ಪ್ರಾರಂಭಿಸಲಾದ ಮತ್ತು 15 ವರ್ಷಗಳ ಅಸ್ಥಿತ್ವವನ್ನು ಪೂರೈಸಲ್ಪಟ್ಟಿರುವ ಮತ್ತು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವಂತೆ ಕೋರಿ ಸಮ್ಮತಿಯನ್ನು ಸೂಚಿಸಿರುವಂತಹ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ವೇತನಾನುದಾನ ಸಂಹಿತೆಗೆ ಒಳಪಡಿಸುವಂತೆ ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಖಾಸಗಿ ಪಾಲಿಟೆಕ್ನಿಕ್‌ಗಳ ಆಡಳಿತ ಮಂಡಳಿಗಳು ಹಾಗೂ ವಿವಿಧ ಸಂಘ / ಸಂಸ್ಥೆಗಳು ಮನವಿ ಸಲ್ಲಿಸಿ ಸುಮಾರು 15 ವರ್ಷಕ್ಕಿಂತ ಹೆಚ್ಚಿನ ಅವಧಿಯಲ್ಲಿ ಪಾಲಿಟೆಕ್ನಿಕ್ ಸಂಸ್ಥೆಗಳನ್ನು ನಡೆಸಲಾಗುತ್ತಿದ್ದು, ಕೆಲವೊಂದು ಪಾಲಿಟೆಕ್ನಿಕ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿದ್ದು, ಈ ಭಾಗದ ಬಡ ಮತ್ತು ಹಿಂದುಳಿದ, ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮವಾದ ತಾಂತ್ರಿಕ ತರಬೇತಿ ನೀಡಿ ಡಿಪ್ಲೊಮಾ ವ್ಯಾಸಂಗ ಪಡೆಯಲು ಅನುಕೂಲ ಕಲ್ಪಿಸಿದ್ದು, ಈ ಸಂಸ್ಥೆಗಳಲ್ಲಿನ ಉಪನ್ಯಾಸಕರು / ಸಿಬ್ಬಂದಿ ವರ್ಗದವರು ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಾ ಬಂದಿದ್ದು, ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿದ್ದು ಇತ್ತೀಚಿನ ಹಣದುಬ್ಬರದ ಕಾರಣದಿಂದ ಜೀವನ ನಡೆಸಲು ತೊಂದರೆ ಅನುಭವಿಸುತ್ತಿದ್ದಾರೆ. ಆದುದರಿಂದ, ಈ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ದಿನಾಂಕ:01-06-1987ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಮತ್ತು 15 ವರ್ಷಗಳ ಅಸ್ಥಿತ್ವವನ್ನು ಪೂರೈಸಿರುವ ಹದಿನೈದು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 101 ಟಿಪಿಇ 2012,**
**ಬೆಂಗಳೂರು, ದಿನಾಂಕ:13ನೇ ಫೆಬ್ರವರಿ 2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ ದಿನಾಂಕ:1-6-1987ಕ್ಕಿಂತ ಮುಂಚೆ ಪ್ರಾರಂಭಿಸಲ್ಪಟ್ಟ ಮತ್ತು 15 ವರ್ಷಗಳ ಅಸ್ತಿತ್ವವನ್ನು ಪೂರೈಸಿದ 15 (ಹದಿನೈದು) ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ

ವೇತನಾನುದಾನಕ್ಕೆ ಒಳಪಡಿಸಿ ಶೇ.100 ರಷ್ಟು ವೇತನಾನುದಾನವನ್ನು ನೀಡಲು ಸರ್ಕಾರವು ಮಂಜೂರಾತಿ ನೀಡಿದೆ.

(1) ದಿನಾಂಕ:1-6-1987ರ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಮತ್ತು ಎಐಸಿಟಿಇ ಯಿಂದ ಅನುಮೋದನೆಯಾದ ಕೋರ್ಸುಗಳಿಗೆ ಮಾತ್ರ ವೇತನಾನುದಾನವನ್ನು ವಿಸ್ತರಿಸುವುದು

(2) ಎಐಸಿಟಿಇ ನಿಗದಿಪಡಿಸಿದ ಷರತ್ತು / ನಿಬಂಧನೆಗಳು ಹಾಗೂ ಪ್ರಚಲಿತ ಸರ್ಕಾರಿ ಆದೇಶಗಳಲ್ಲಿನ ಷರತ್ತು / ನಿಬಂಧನೆಗಳಿಗೊಳಪಟ್ಟು ಕ್ರಮಬದ್ಧವಾಗಿ ಆಯ್ಕೆ ಸಮಿತಿಯ ಮೂಲಕ ಆಯ್ಕೆಗೊಂಡ ಎಲ್ಲಾ ಅರ್ಹ ಬೋಧಕ : ಬೋಧಕೇತರ ಸಿಬ್ಬಂದಿಗೆ ವೇತನಾನುದಾನವನ್ನು ವಿಸ್ತರಿಸುವುದು

(3) ಬೋಧಕ : ಬೋಧಕೇತರ ಹುದ್ದೆಗಳ ನೇಮಕಾತಿಗಳು ಕ್ರಮಬದ್ಧವಾಗಿ ಆಯ್ಕೆ ಸಮಿತಿಯ ಮುಖಾಂತರ ಆಗಿರತಕ್ಕದ್ದು. ಪ್ರತಿಯೊಬ್ಬ ಬೋಧಕ : ಬೋಧಕೇತರ ಸಿಬ್ಬಂದಿಯವರು ಅವರುಗಳು ಹುದ್ದೆಗೆ ನಿಗದಿಪಡಿಸಿರುವ ಕನಿಷ್ಟ ಶೈಕ್ಷಣಿಕ ಅರ್ಹತೆ, ವಯೋಮಿತಿ ಮತ್ತು ಇನ್ನಿತರೆ ಅರ್ಹತೆಗಳನ್ನು ಹೊಂದಿರತಕ್ಕದ್ದು.

(4) ಸಂಬಂಧಪಟ್ಟ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯವರು ಕ್ರಮಬದ್ಧವಾಗಿ ಮಾಡಿಕೊಂಡಿರುವ ಬೋಧಕ : ಬೋಧಕೇತರ ನೇಮಕಾತಿಯು ಸಂಬಂಧಪಟ್ಟ ತಾಂತ್ರಿಕ ಶಿಕ್ಷಣ ನಿರ್ದೇಶಕರಿಂದ ಪರಿಶೀಲಿಸಲ್ಪಟ್ಟಿರಬೇಕು

(5) ಬೋಧಕ ಸಿಬ್ಬಂದಿ ಎಐಸಿಟಿಇ ನಿಗದಿಪಡಿಸಿರುವ ಕಾರ್ಯಭಾರ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇರತಕ್ಕದ್ದು

(6) ವೇತನಾನುದಾನಕ್ಕೆ ಒಳಪಡಿಸಲ್ಪಟ್ಟ ಪಾಲಿಟೆಕ್ನಿಕ್‌ಗಳ ಆಡಳಿತ ಮಂಡಳಿಯು ನಿಗದಿತ ನಮೂನೆಯಲ್ಲಿ ಕರಾರು ಪತ್ರವನ್ನು ರೂ.200/-ಗಳ ಛಾಪಾ ಕಾಗದ (ತ್ರಿಪ್ರತಿ) ದಲ್ಲಿ ಸರ್ಕಾರಕ್ಕೆ ಬರೆದು ಕೊಡತಕ್ಕದ್ದು. ಕರಾರು ಪತ್ರಕ್ಕೆ ಸಹಿ ಮಾಡಲು ಬರುವ ಸಕ್ಷಮ ಅಧಿಕಾರಿಗೆ ಅಧಿಕಾರ ನೀಡಿ ಪತ್ರವನ್ನು ಒದಗಿಸತಕ್ಕದ್ದು.

(7) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಯಮಾನುಸಾರ ಸೂಕ್ತ ಪ್ರಾತಿನಿಧ್ಯ ಕಲ್ಪಿಸತಕ್ಕದ್ದು ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ನಿಗದಿಪಡಿಸಿ ರೋಸ್ಟರ್‌ನಂತೆ ಸರ್ಕಾರದ ಅನುಮೋದನೆಯೊಂದಿಗೆ ಕಾಲಕಾಲಕ್ಕೆ ಭರ್ತಿ ಮಾಡತಕ್ಕದ್ದು.

(8) ವೇತನಾನುದಾನಕ್ಕೆ ಒಳಪಡಿಸಿದ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನಿತ ಕೋರ್ಸುಗಳಲ್ಲಿನ ಶೇಕಡ 100 ರಷ್ಟು ಸೀಟುಗಳು ಸರ್ಕಾರದ ಸೀಟುಗಳಾಗಿರುತ್ತವೆ.

ಮೇಲ್ಕಂಡ ಷರತ್ತುಗಳನ್ನು ಪೂರೈಸದಿರುವ ಖಾಸಗಿ ಪಾಲಿಟೆಕ್ನಿಕ್‌ಗಳು ವೇತನಾನುದಾನಕ್ಕೆ ಅರ್ಹವಾಗುವುದಿಲ್ಲ. ಸರ್ಕಾರ : ತಾಂತ್ರಿಕ ಶಿಕ್ಷಣ ನಿರ್ದೇಶಕರು ಸರ್ಕಾರದ ಕಾರ್ಯ ನೀತಿಗೆ ಅನುಗುಣವಾಗಿ ನಿಬಂಧನೆಯನ್ನು : ಷರತ್ತನ್ನು ವಿಧಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಈ ನಿಬಂಧನೆ ಮತ್ತು ಷರತ್ತನ್ನು ಪೂರೈಸದಿರುವ : ಉಲ್ಲಂಘಿಸಿದ ಪಾಲಿಟೆಕ್ನಿಕ್‌ಗಳಿಗೆ ನೀಡಲಾಗುವ ಅನುದಾನವನ್ನು ರದ್ದುಗೊಳಿಸುವ/ಹಿಂತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಕಾಯ್ದಿರಿಸಿಕೊಂಡಿದೆ.

ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಸಂಬಂಧದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಪ್ರತಿಯೊಂದು ಪಾಲಿಟೆಕ್ನಿಕ್‌ನ ಬೋಧಕ : ಬೋಧಕೇತರ ಹುದ್ದೆಗಳ ವಿವರಗಳನ್ನು ಎಐಸಿಟಿಇ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಇತರೆ ಅನುದಾನಿತ ಪಾಲಿಟೆಕ್ನಿಕ್‌ಗಳ ಸ್ಟಾಫ್ ಪ್ಯಾಟ್ರನ್ ಮತ್ತು ಕಾರ್ಯಭಾರಗಳ ಬಗ್ಗೆ ಪರಿಶೀಲಿಸಿ ಸಿಬ್ಬಂದಿ ನಮೂನೆ ಮಂಜೂರಾತಿಗಾಗಿ ಪ್ರತ್ಯೇಕವಾಗಿ ಪ್ರತಿಯೊಂದು ಪಾಲಿಟೆಕ್ನಿಕ್‌ನ ಪ್ರಸ್ತಾವನೆಯನ್ನು ಸರ್ಕಾರದ ಮಂಜೂರಾತಿಗಾಗಿ ಜರೂರು ಸಲ್ಲಿಸತಕ್ಕದ್ದು.

ಈ ಆದೇಶವು "ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮ 19//ರ ನಿಯಮ ಐಟಂ 15ರಲ್ಲಿನ ಅವಕಾಶದಂತೆ ಹೊರಡಿಸಲಾಗಿದೆ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕ.ರಹಮತ್‌ಉಲ್ಲಾ)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
3. ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7/8), ವಿಧಾನ ಸೌಧ, ಬೆಂಗಳೂರು
5. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ
6. ಸಂಬಂಧಪಟ್ಟ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಕಾರ್ಯದರ್ಶಿಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
7. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನ ಸೌಧ, ಬೆಂಗಳೂರು
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ)
9. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನ ಸೌಧ, ಬೆಂಗಳೂರು
10. ಸರ್ಕಾರ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಅವರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
11. ಶಾಖಾ ರಕ್ಷಾ ಕಡತ : ಹೆಚ್ಚಿನ ಪ್ರತಿ

ಸರ್ಕಾರಿ ಆದೇಶ ಸಂಖ್ಯೆಇಡಿ 101 ಟಿಪಿಇ 2012, ಬೆಂಗಳೂರು, ದಿನಾಂಕ: 13-02-2013ರ

ಅನುಬಂಧ

1) ಶ್ರೀ ವೆಂಕಟರಾಜು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
2) ಎಂ.ಇ.ಎಸ್ ಪಾಲಿಟೆಕ್ನಿಕ್, ಮಧುಗಿರಿ
3) ಬಿ.ಇ.ಟಿ ಪಾಲಿಟೆಕ್ನಿಕ್, ಕೆ.ಎಂ.ದೊಡ್ಡಿ, ಮಂಡ್ಯ
4) ಎನ್.ಇ.ಎಸ್ ಪಾಲಿಟೆಕ್ನಿಕ್, ರಾಜಾಪುರ, ಗುಲ್ಬರ್ಗಾ
5) ಆದರ್ಶ ಪಾಲಿಟೆಕ್ನಿಕ್, ಆರ್.ಟಿ.ನಗರ, ಬೆಂಗಳೂರು
6) ರಾಯಬಾಗ್ ಪಾಲಿಟೆಕ್ನಿಕ್, ರಾಯಬಾಗ್, ಬೆಳಗಾವಿ ಜಿಲ್ಲೆ
7) ಹೆಚ್.ಕೆ.ಇ.ಎಸ್ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ
8) ಹೆಚ್.ಕೆ.ಇ.ಎಸ್ ಪಾಲಿಟೆಕ್ನಿಕ್, ಗುಲ್ಬರ್ಗಾ
9) ಹೆಚ್.ಕೆ.ಇ.ಎಸ್ ಪಾಲಿಟೆಕ್ನಿಕ್, ರಾಯಚೂರು
10) ಮಹಮೂದ್ ಷರೀಫ್ ಪಾಲಿಟೆಕ್ನಿಕ್, ಬೆಂಗಳೂರು
11) ಕೆ.ಜೆ.ಟಿ.ಇ.ಟಿ ಪಾಲಿಟೆಕ್ನಿಕ್, ಮುಳಬಾಗಿಲು, ಕೋಲಾರ ಜಿಲ್ಲೆ
12) ಎಂ.ಎನ್. ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಬೆಂಗಳೂರು
13) ಎಸ್.ಎಸ್.ಆರ್. ಪಾಲಿಟೆಕ್ನಿಕ್, ಜೇವರ್ಗಿ, ಗುಲ್ಬರ್ಗಾ ಜಿಲ್ಲೆ
14) ತೋಂಟದಾರ್ಯ ಪಾಲಿಟೆಕ್ನಿಕ್, ಗದಗ
15) ಜೆ.ಎಸ್.ಎಸ್ ಪಾಲಿಟೆಕ್ನಿಕ್, ಮೈಸೂರು

(ಕೆ.ರೆಹಮತ್‌ಉಲ್ಲಾ)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).

13/2

ಅನುಬಂಧ - 2

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ: 01-06-1987ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಹಾಗೂ 15 ವರ್ಷಗಳ ಅಸ್ತಿತ್ವವನ್ನು ಪೂರೈಸಲ್ಪಟ್ಟಿರುವ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.

- - - - -

**ಓದಲಾಗಿದೆ:**

(1) ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಡಿಟಿಇ 20 ಡಿವಿಪಿ (1) 2010 ದಿನಾಂಕ: 14-03-2012, 09-01-2013 ಮತ್ತು 13-03-2013.

(2) ಸರ್ಕಾರಿ ಆದೇಶ ಸಂಖ್ಯೆ:ಇಡಿ 101 ಟಿಪಿಇ 2012, ದಿನಾಂಕ:13-02-2013.

**ಪ್ರಸ್ತಾವನೆ:**

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಪತ್ರಗಳಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ದಿನಾಂಕ: 01-06-1987ರ ಪೂರ್ವದಲ್ಲಿ ಪ್ರಾರಂಭಿಸಲಾದ ಹಾಗೂ 15 ವರ್ಷಗಳ ಅಸ್ತಿತ್ವವನ್ನು ಪೂರೈಸಲ್ಪಟ್ಟಿರುವ ಮತ್ತು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವಂತೆ ಕೋರಿ ಸಮ್ಮತಿಯನ್ನು ಸೂಚಿಸಿರುವಂತಹ 33 ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳನ್ನು ಸರ್ಕಾರಧ ವೇತನಾನುದಾನ ಸಂಹಿತೆಗೆ ಒಳಪಡಿಸುವಂತೆ ಕೋರಿದ್ದರು.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ದಿನಾಂಕ: 01-06-1987ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಹಾಗೂ 15 ವರ್ಷಗಳ ಅಸ್ತಿತ್ವವನ್ನು ಪೂರೈಸಿರುವ 33 ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳು ಬಹುತೇಕ ಹಿಂದುಳಿದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ತಾಂತ್ರಿಕ ಶಿಕ್ಷಣ ಲಭ್ಯವಾಗುವ ದೃಷ್ಟಿಯಿಂದ ಆಡಳಿತ ಮಂಡಳಿಯವರ ಕೋರಿಕೆ ಹಾಗೂ ಸಮ್ಮತಿಯನ್ನು ಪರಿಗಣಿಸಿ ಸರ್ಕಾರವು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ 15 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿದೆ. ಉಳಿದ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಅವುಗಳ ಪೈಕಿ 16 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 101 ಟಿಪಿಇ 2012**
**ಬೆಂಗಳೂರು ದಿನಾಂಕ:16ನೇ ಮಾರ್ಚ್ 2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ ದಿನಾಂಕ: 01-06-1987ಕ್ಕಿಂತ ಮುಂಚೆ ಪ್ರಾರಂಭಿಸಲ್ಪಟ್ಟ ಮತ್ತು 15 ವರ್ಷಗಳ ಅಸ್ತಿತ್ವವನ್ನು ಪೂರೈಸಿದ 16 (ಹದಿನಾರು) ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳನ್ನು ಈ ಕೆಳಕಂಡ ಷರತ್ತುಗಳನ್ನು ಪಾಲಿಸುವ ನಿಬಂದನೆಗೊಳಪಟ್ಟು ವೇತನಾನುದಾನಕ್ಕೆ ತಾತ್ವಿಕವಾಗಿ ಒಳಪಡಿಸಲಾಗಿದೆ.

(1) ದಿನಾಂಕ: [illegible] ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಮತ್ತು ಎಐಸಿಟಿಇಯಿಂದ ಅನುಮೋದನೆಗೊಂಡ ಕೋರ್ಸುಗಳಿಗೆ ಮಾತ್ರ ವೇತನಾನುದಾನವನ್ನು ವಿಸ್ತರಿಸುವುದು.

(2) ತಾಂತ್ರಿಕ ಶಿಕ್ಷಣ ನಿರ್ದೇಶಕರು ವೇತನಾನುದಾನಕ್ಕೆ ಒಳಪಡಿಸಲು [illegible] ಪಾಲಿಟೆಕ್ನಿಕ್ ಬಗ್ಗೆ ಸಂಪೂರ್ಣ ಮಾಹಿತಿ ಅಂದರೆ, [illegible] ಹೊಂದಿರುವ ಭೂಮಿ, ಕಟ್ಟಡದ ವಿವರ, ವೇತನದಾನುದಾನ [illegible] ನಿಯಮಗಳನ್ನು

ಪಾಲಿಸಿರುವಿಕೆ, ವಿದ್ಯಾರ್ಥಿಗಳ ವಿವರ, ಸಂಸ್ಥೆಗಳ ಆರ್ಥಿಕ ಸ್ಥಿತಿಗತಿಗಳ ವಿವರ, ಸಿಬ್ಬಂದಿ ನೇಮಕಾತಿ ವಿವರಗಳು, ಮೀಸಲಾತಿ ನಿಯಮಗಳನ್ನು ಪಾಲಿಸಿರುವುದು, ವೇತನಾನುದಾನಕ್ಕೆ ಒಳಪಡಿಸಲಿರುವ ಸಿಬ್ಬಂದಿಗಳಿಗೆ ವೇತನದಿಂದಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಮುಂತಾದವುಗಳ ಬಗ್ಗೆ (Case by case) ಪಾಲಿಟೆಕ್ನಿಕ್‌ವಾರು ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರತ್ಯೇಕ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಮಾತ್ರ ಸಿಬ್ಬಂದಿ ನಮೂನೆ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು.

(3) ಎಐಸಿಟಿಇ ನಿಗದಿಪಡಿಸಿದ ಷರತ್ತು / ನಿಬಂಧನೆಗಳು ಹಾಗೂ ಪ್ರಚಲಿತ ಸರ್ಕಾರಿ ಆದೇಶಗಳಲ್ಲಿನ ಷರತ್ತು / ನಿಬಂಧನೆಗಳಿಗೊಳಪಟ್ಟು ಕ್ರಮಬದ್ಧವಾಗಿ ಆಯ್ಕೆ ಸಮಿತಿಯ ಮೂಲಕ ಆಯ್ಕೆಗೊಂಡ ಎಲ್ಲಾ ಅರ್ಹ ಬೋಧಕ : ಬೋಧಕೇತರ ಸಿಬ್ಬಂದಿಗೆ ವೇತನಾನುದಾನವನ್ನು ವಿಸ್ತರಿಸುವುದು.

(4) ಬೋಧಕ / ಬೋಧಕೇತರ ಹುದ್ದೆಗಳ ನೇಮಕಾತಿಗಳು ಕ್ರಮಬದ್ಧವಾಗಿ ಆಯ್ಕೆ ಸಮಿತಿಯ ಮುಖಾಂತರ ಆಗಿರತಕ್ಕದ್ದು. ಪ್ರತಿಯೊಬ್ಬ ಬೋಧಕ / ಬೋಧಕೇತರ ಸಿಬ್ಬಂದಿಯವರು ಅವರುಗಳು ಹುದ್ದೆಗೆ ನಿಗದಿಪಡಿಸಿರುವ ಕನಿಷ್ಠ ಶೈಕ್ಷಣಿಕ ಅರ್ಹತೆ, ವಯೋಮಿತಿ ಮತ್ತು ಇನ್ನಿತರೆ ಅರ್ಹತೆಗಳನ್ನು ಹೊಂದಿರತಕ್ಕದ್ದು.

(5) ಸಂಬಂಧಪಟ್ಟ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯವರು ಕ್ರಮಬದ್ಧವಾಗಿ ಮಾಡಿಕೊಂಡಿರುವ ಬೋಧಕ / ಬೋಧಕೇತರ ನೇಮಕಾತಿಯು ಸಂಬಂಧಪಟ್ಟ ತಾಂತ್ರಿಕ ಶಿಕ್ಷಣ ನಿರ್ದೇಶಕರಿಂದ ಪರಿಶೀಲಿಸಲ್ಪಟ್ಟಿರಬೇಕು.

(6) ಬೋಧಕ ಸಿಬ್ಬಂದಿ ಎಐಸಿಟಿಇ ನಿಗದಿಪಡಿಸಿರುವ ಕಾರ್ಯಭಾರ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇರತಕ್ಕದ್ದು.

(7) ಮಂಜೂರಾದ ಹುದ್ದೆಗಳಿಗೆ ನೇಮಕಾತಿ ಮಾಡುವ ಮುನ್ನ ಭರ್ತಿ ಮಾಡಲು ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಹಾಗೂ ಎ.ಐ.ಸಿ.ಟಿ.ಇ ಹಾಗೂ ರಾಜ್ಯ ಸರ್ಕಾರದ ನಿಗದಿಪಡಿಸಿದ ವಿದ್ಯಾರ್ಹತೆ, ವಯೋಮಿತಿ ಹಾಗೂ ಮೀಸಲಾತಿ ನಿಯಮಗಳನ್ನು ಮತ್ತು ಪಾರದರ್ಶಕವಾಗಿ ನೇಮಕಾತಿ ನಿಯಮಗಳನ್ನು ಪಾಲಿಸಿ ನೇಮಕಾತಿ ಮಾಡಲಾಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಈಗಾಗಲೇ ಸಂಸ್ಥೆಯು ನೇಮಕಾತಿ ಮಾಡಿಕೊಂಡಿದ್ದರೂ ಅವುಗಳ ಬಗ್ಗೆ ಸಹ ಮೇಲೆ ತಿಳಿಸಿರುವ ಅಂಶಗಳನ್ನು ಪಾಲಿಸಿರುವ ಬಗ್ಗೆ ದೃಢೀಕರಿಸಿ ತಾಂತ್ರಿಕ ಶಿಕ್ಷಣ ಇಲಾಖೆ ಅನುಮೋದಿಸಬೇಕು.

(8) ವೇತನಾನುದಾನಕ್ಕೆ ಒಳಪಡಿಸಲ್ಪಟ್ಟ ಪಾಲಿಟೆಕ್ನಿಕ್‌ಗಳ ಆಡಳಿತ ಮಂಡಳಿಯು ನಿಗದಿತ ನಮೂನೆಯಲ್ಲಿ ಕರಾರು ಪತ್ರವನ್ನು ರೂ.200/-ಗಳ ಛಾಪಾ ಕಾಗದ (ತ್ರಿಪ್ರತಿ)ದಲ್ಲಿ ಸರ್ಕಾರಕ್ಕೆ ಬರೆದು ಕೊಡತಕ್ಕದ್ದು. ಕರಾರು ಪತ್ರಕ್ಕೆ ಸಹಿ ಮಾಡಲು ಬರುವ ಸಕ್ಷಮ ಅಧಿಕಾರಿಗೆ ಅಧಿಕಾರ ನೀಡಿ ಪತ್ರವನ್ನು ಒದಗಿಸತಕ್ಕದ್ದು.

(9) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಯಮಾನುಸಾರ ಸೂಕ್ತ ಪ್ರಾತಿನಿಧ್ಯ ಕಲ್ಪಿಸತಕ್ಕದ್ದು ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ನಿಗದಿಪಡಿಸಿ ರೋಸ್ಟರ್ ನಂತರ ಸರ್ಕಾರದ ಅನುಮೋದನೆಯೊಂದಿಗೆ ಕಾಲಕಾಲಕ್ಕೆ ಭರ್ತಿ ಮಾಡತಕ್ಕದ್ದು.

(10) ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 227 ಎಸ್‌ಇಪಿ 1994 ದಿನಾಂಕ:21.04.1990ರಂತೆ ದಿನಾಂಕ:01.06.1992ರ ಪೂರ್ವದಲ್ಲಿ ನೇಮಕಗೊಂಡ ಅಭ್ಯರ್ಥಿಗಳಿಗೆ ಮಾತ್ರ ಮೀಸಲಾತಿಯಿಂದ ವಿನಾಯಿತಿ ಇದ್ದು. ಆ ಹುದ್ದೆಗಳಲ್ಲಿ ಇರುವ ಅಭ್ಯರ್ಥಿಗಳ ನಿವೃತ್ತಿ, ರಾಜೀನಾಮೆ, ಇತರೆ ಯಾವುದೇ ಕಾರಣದಿಂದ ಖಾಲಿಯಾದ ನಂತರ ಬ್ಯಾಕ್‌ಲಾಗ್ ಹುದ್ದೆಗಳು ಎಂದು ಪರಿಗಣಿಸಿ ಮೀಸಲಾತಿಗೆ ಒಳಪಡಿಸಬೇಕು. ದಿನಾಂಕ:01.06.1992 ರ ನಂತರ ನೇಮಕವಾದ ಎಲ್ಲ ಪ್ರಕರಣಗಳು ಮೇಲೆ ತಿಳಿಸಿದ ಆದೇಶದ ಪ್ರಕಾರ ಮೀಸಲಾತಿ ಪಾಲಿಸಿರುವ ಪ್ರಕರಣಗಳನ್ನು ಮಾತ್ರ ನೇಮಕಾತಿ ಅನುಮೋದನೆಗೆ ಸಲ್ಲಿಸತಕ್ಕದ್ದು. ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 10 ಎಸ್‌ಆರ್‌ಸಿ 1997 ದಿನಾಂಕ:24.06.1997ರ ಅನುಬಂಧದಲ್ಲಿ ನಿಗದಿಪಡಿಸಿರುವಂತಹ ಬ್ಯಾಕ್‌ಲಾಗ್ ಹುದ್ದೆಗಳನ್ನು

ಭರ್ತಿಮಾಡುವುದು ಹಾಗೂ ಹೆಚ್ಚುವರಿ ಬಿಂದುಗಳು ಲಭ್ಯವಾಗುವುದಾದಲ್ಲಿ ಅವುಗಳನ್ನು ಗುರುತಿಸತಕ್ಕದ್ದು. ಆ ಪ್ರಕಾರ ಇಲಾಖೆಯ ಸಂಬಂಧಿಸಿದ ಮುಖ್ಯಸ್ಥರು ಪ್ರತಿ ಅಭ್ಯರ್ಥಿಯ ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಿ, ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

(11) ವೇತನವನ್ನು ಹುದ್ದೆಯ ಕನಿಷ್ಠ ಮೂಲ ವೇತನದಲ್ಲಿ ಪ್ರಕರಣವಿದ್ದಂತೆ ಎ.ಐ.ಸಿ.ಟಿ.ಇ ವೇತನ ಶ್ರೇಣಿಯಲ್ಲಿ ಅಥವಾ ರಾಜ್ಯ ವೇತನ ಶ್ರೇಣಿಯಲ್ಲಿ ಯಾವುದಾದರೂ ಒಂದರಲ್ಲಿ ಇಂತಹ ನಿಗದಿಪಡಿಸುವಿಕೆಯ ದಿನಾಂಕದಿಂದ ನಿಗದಿಪಡಿಸಬೇಕು.

(12) ವೇತನಾನುದಾನಕ್ಕೆ ಒಳಪಡಿಸಿದ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನಿತ ಕೋರ್ಸುಗಳಲ್ಲಿನ ಶೇಕಡ 100ರಷ್ಟು ಸೀಟುಗಳು ಸರ್ಕಾರದ ಸೀಟುಗಳಾಗಿರುತ್ತವೆ.

ಈ ಮೇಲ್ಕಂಡ ಷರತ್ತುಗಳು ಸರ್ಕಾರಿ ಆದೇಶ ಸಂಖ್ಯೆ:ಇಡಿ 101 ಟಿಪಿಇ 2012, ದಿನಾಂಕ:13-02-2013ರಲ್ಲಿ ವೇತನಾನುದಾನಕ್ಕೆ ಒಳಪಡಿಸಿರುವ 15 ಖಾಸಗಿ ಪಾಲಿಟೆಕ್ನಿಕ್‌ಗಳಿಗೂ ಸಹ ಯಥಾವತ್ತಾಗಿ ಅನ್ವಯವಾಗುತ್ತದೆ.

ಮೇಲ್ಕಂಡ ಷರತ್ತುಗಳನ್ನು ಪೂರೈಸದಿರುವ ಖಾಸಗಿ ಪಾಲಿಟೆಕ್ನಿಕ್‌ಗಳು ವೇತನಾನುದಾನಕ್ಕೆ ಅರ್ಹವಾಗುವುದಿಲ್ಲ. ಸರ್ಕಾರ / ತಾಂತ್ರಿಕ ಶಿಕ್ಷಣ ನಿರ್ದೇಶಕರು ಸರ್ಕಾರದ ಕಾರ್ಯನೀತಿಗೆ ಅನುಗುಣವಾಗಿ ನಿಬಂಧನೆಯನ್ನು / ಷರತ್ತನ್ನು ವಿಧಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಈ ನಿಬಂಧನೆ ಮತ್ತು ಷರತ್ತನ್ನು ಪೂರೈಸದಿರುವ / ಉಲ್ಲಂಘಿಸಿದ ಪಾಲಿಟೆಕ್ನಿಕ್‌ಗಳಿಗೆ ನೀಡಲಾಗುವ ಅನುದಾನವನ್ನು ರದ್ದುಗೊಳಿಸುವ / ಹಿಂತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಕಾಯ್ದಿರಿಸಿಕೊಂಡಿದೆ.

ವೇತನಾನುದಾನಕ್ಕೆ ಒಳಪಡಿಸಲಾದ ಪಾಲಿಟೆಕ್ನಿಕ್‌ಗಳಿಗೆ ಸಿಬ್ಬಂದಿ ನಮೂನೆ ಮಂಜೂರು ಮಾಡುವ ಬಗ್ಗೆ ತಾಂತ್ರಿಕ ಶಿಕ್ಷಣ ನಿರ್ದೇಶಕರು ಪ್ರತಿಯೊಂದು ಪಾಲಿಟೆಕ್ನಿಕ್‌ನ ಬೋಧಕ / ಬೋಧಕೇತರ ಹುದ್ದೆಗಳ ವಿವರಗಳನ್ನು ಎಐಸಿಟಿಇ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಇತರೆ ಅನುದಾನಿತ ಪಾಲಿಟೆಕ್ನಿಕ್‌ಗಳ ಸ್ಟಾಫ್ ಪ್ಯಾಟ್ರನ್ ಮತ್ತು ಕಾರ್ಯಭಾರಗಳ ಬಗ್ಗೆ ಪರಿಶೀಲಿಸಿ ಸಿಬ್ಬಂದಿ ನಮೂನೆ ಮಂಜೂರಾತಿಗಾಗಿ ಸಿಬ್ಬಂದಿಗಳ ನೇಮಕಾತಿ ವಿವರಗಳೊಂದಿಗೆ ಪ್ರತ್ಯೇಕವಾಗಿ ಪ್ರತಿಯೊಂದು ಪಾಲಿಟೆಕ್ನಿಕ್‌ನ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ದೃಢೀಕರಿಸಿ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸತಕ್ಕದ್ದು.

ಈ ಆದೇಶವು "ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮ 1977ರ ನಿಯಮ ಐಟಂ 15ರಲ್ಲಿನ ಅವಕಾಶದಂತೆ ಹೊರಡಿಸಲಾಗಿದೆ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ರೆಹಮತ್‌ಉಲ್ಲಾ)
ಸರ್ಕಾರದ ಉಪ ಕಾರ್ಯದರ್ಶಿ.
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು.
3. ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7/8), ವಿಧಾನಸೌಧ, ಬೆಂಗಳೂರು
5. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ

6. ಸಂಬಂಧಪಟ್ಟ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಕಾರ್ಯದರ್ಶಿಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
7. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ)
9. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಅವರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
11. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 101 ಟಿಪಿಇ 2012,**
**ಬೆಂಗಳೂರು ದಿನಾಂಕ:16-03-2013ರ ಅನುಬಂಧ**

1) ಇಂದಿರಮ್ಮ ಎ.ಎಂ. & ಡಾ: ಬಿ.ಕೆ.ರಾಮಯ್ಯ ಪಾಲಿಟೆಕ್ನಿಕ್, ಬೆಂಗಳೂರು (ಐ.ಆರ್.ಪಾಲಿಟೆಕ್ನಿಕ್)
2) ಬಿ.ಟಿ.ಎಲ್. ಪಾಲಿಟೆಕ್ನಿಕ್, ಹೊಸೂರು ರಸ್ತೆ, ಬೆಂಗಳೂರು.
3) ನಾಡಿಗಿರ್ ಡೇ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು.
4) ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್, ಬೆಳಗಾಂ.
5) ಎಸ್.ಎನ್.ಜೆ.ಪಿ. ಪಾಲಿಟೆಕ್ನಿಕ್, ನಿಡಸೊಸಿ, ಬೆಳಗಾವಿ.
6) ಬಿ.ಎಲ್.ಡಿ.ಇ. ಪಾಲಿಟೆಕ್ನಿಕ್, ಬಿಜಾಪುರ
7) ರಾಮಕೃಷ್ಣ ಪಾಲಿಟೆಕ್ನಿಕ್, ಶ್ರೀನಿವಾಸಪುರ
8) ಟಿ.ಎಂ.ಎ.ಇ. ಸೊಸೈಟಿ ಪಾಲಿಟೆಕ್ನಿಕ್, ಜೇಡಿಕಟ್ಟೆ, ಭದ್ರಾವತಿ
9) ಕಾವೇರಿ ಪಾಲಿಟೆಕ್ನಿಕ್, ಗೋಣಿಕೊಪ್ಪ
10) ಗೌಷಿಯಾ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು.
11) ಸಿದ್ಧರಾಮೇಶ್ವರ ಪಾಲಿಟೆಕ್ನಿಕ್, ಹಾಸನ ರಸ್ತೆ, ತಿಪಟೂರು
12) ಎಸ್.ವಿ.ಸಿ. ಪಾಲಿಟೆಕ್ನಿಕ್, ದಾಂಡೇಲಿ
13) ವಿವೇಕಾನಂದ ಪಾಲಿಟೆಕ್ನಿಕ್, ಪುತ್ತೂರು
14) ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ
15) ಕೆ.ಐ.ಇ.ಟಿ. ಪಾಲಿಟೆಕ್ನಿಕ್, ಕನಕಪುರ ರಸ್ತೆ, ಬೆಂಗಳೂರು
16) ನಿಟ್ಟೂರು ಪಾಲಿಟೆಕ್ನಿಕ್, ಬೀದರ್

(ಕೆ.ರೆಹಮತ್‌ಉಲ್ಲಾ)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).